ಅಸಲು ದಾವಾ ನಂ. 16/2023 ಪಿಡಬ್ಲೂ : 1

ದಿನಾಂಕಃ 03-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಯರ ಪರವಾಗಿಃ ಶ್ರೀ ಎಸ್ ಯು ಎ ವಕೀಲರಿಂದಃ**

3. 2020-2021 ರಲ್ಲಿ ನಾನು ಹೊನ್ನಾವರ ತಾಲೂಕು ಸಾಲಕೋಡು , ಚಂದಾವರದಲ್ಲಿ ಪಿಡಿಓ ಆಗಿ ಕಾರ್ ನಿರ್ವಹಿಸಿರುತ್ತೇನೆ . 2022-2023 ರಲ್ಲಿ ಹೆಗಡೆ , 2024 ರಲ್ಲಿ ಅಳಕೋಡದಲ್ಲಿ ಕೆಲಸ ಮಾಡಿರುತ್ತೇನೆ. ನಾನು ದಿಃ 07-04-2025 ರಿಂದ ನಾನು ಗೋಕರ್ಣ ಪ್ರಭಾರಿ ಪಿಡಿಓ ಆಗಿ ಕೆಲಸ ನಿರ್ವಹಿಸುತ್ತಿದ್ದೇನೆ. 2020-2021 ರಿಂದ 2023-2024 ರವರೆಗೆ ಗೋಕರ್ಣ ಗ್ರಾಮದಲ್ಲಿ ವಿನಯಕುಮಾರ, ಮಂಜುನಾಥ ಕೋಡದ(ಪ್ರಭಾರಿ) ಹಾಗೂ ಬಾಲಚಂದ್ರ ಪಟಗಾರ (ಪ್ರಭಾರಿ) ಪಿಡಿಓ ಆಗಿ ಕಾರ್ಯ ನಿರ್ವಹಿಸಿರುತ್ತಾರೆ . ದಿಃ 07-04-2025 ರ ಪೂರ್ವದಲ್ಲಿ ವ್ಯವಹಾರದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ . ದಾವೆ ದಾಖಲು ಮಾಡಲು ಮಾಹಿತಿಯನ್ನು ಅಧ್ಯಕ್ಷರಾದ ಸುಮನಾ ಗೌಡಾ ಹಾಗೂ ಪಿಡಿಓ ವಿನಯಕುಮಾರರವರು ಕೊಟ್ಟಿರುತ್ತಾರೆ . ವಿನಯಕುಮಾರ ಹಾಗೂ ಮಂಜುನಾಥ ಕೋಡದ ಇವರು ಈ ದಾವೆಯಲ್ಲಿ ಏನು ಪ್ರಮಾಣ ಪತ್ರ ಸಲ್ಲಿಸಿದ್ದಾರೆ ಗೊತ್ತಿದೆ . ಅದರ ಪ್ರತಿ ನಮ್ಮ ಪಂಚಾಯತಿಯಲ್ಲಿ ಇದೆ . ನಾನು ಈ ಕೇಸಿನ ಬಗ್ಗೆ ಅವರಿಂದ ಮಾಹಿತಿ ಕಲೆಕ್ಟ ಮಾಡಿದ್ದೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಹಾಗೂ ಹಿಂದೆ ಹಾಕುವವರ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಅಕ್ಷರಶಃ ಒಂದೇ ಇದೆ ಎಂದರೆ ಸಾಕ್ಷಿ ಸಾಮ್ಯತೆ ಇದೆ ಎಂದು ನುಡಿದಿರುತ್ತಾರೆ . ನನ್ನ ಹೆಸರನ್ನು ಹೊರತು ಪಡಿಸಿ ಬಾಕಿಯವರ ಪ್ರಮಾಣ ಪತ್ರ ಅಕ್ಷರಶಃ ಒಂದೇ ಆಗಿದೆ ಎಂದರೆ ಸಾಕ್ಷಿ ಸಾಮ್ಯತೆ ಇದೆ ಎಂದು ನುಡಿದಿರುತ್ತಾರೆ .

4. ಗ್ರಾಮ ಪಂಚಾಯತಿಯಲ್ಲಿ ವಾಹನ ಟೆಂಡರ ಕುರಿತಾಗಿ ನಾವು ಹಾಜರು ಪಡಿಸಿದ ದಾಖಲಾತಿಗಳು ಇಷ್ಟೇ ಇವೆ ಹೆಚ್ಚಿನ ದಾಖಲಾತಿಗಳ ಹಾಜರಾತಿ ಅವಶ್ಯಕತೆ ಇದ್ದಾಗ ಹಾಜರು ಪಡಿಸುತ್ತೇವೆ . ನ್ಯಾಯಾಲಯ ಬೇರೆ ಯಾವುದಾದರೂ ದಾಖಲಾತಿ ಹಾಜರು ಪಡಿಸುವಂತೆ ಕೇಳಿದರೆ ಹಾಜರಮಿ

ಪಡಿಸುತ್ತೇನೆ. ಈಗ ಹಾಜರು ಪಡಿಸಿರುವ ದಾಖಲಾತಿಗಳನ್ನು ಹೊರತು ಪಡಿಸಿ ಬೇರೆ ಯಾವುದೇ ದಾಖಲಾತಿಗಳನ್ನು ನಮ್ಮ ವಕೀಲರಿಗೆ ಕೊಟ್ಟಿಲ್ಲ . ಬೇರೆ ಯಾವುದೇ ದಾಖಲಾತಿ ಇರುವಿಕೆ ಕುರಿತು ದಾವೆದಲ್ಲಾಗಲೀ , ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಾಗಲೀ ಬರೆದಿಲ್ಲ ಎಂದರೆ ಸಾಕ್ಷಿ ಬೇರೆ ಯಾವುದಾದರೂ ಮಾಹಿತಿ ನ್ಯಾಯಾಲಯ ಕೇಳಿದರೆ ಹಾಜರು ಪಡಿಸುತ್ತೇವೆ ಎಂದು ನುಡಿದಿರುತ್ತಾರೆ .

5. ನಮ್ಮ ಗ್ರಾಮ ಪಂಚಾಯತಿಯಲ್ಲಿ ಟೆಂಡರ ಪ್ರಕಟಣೆ ಸರ್ಕಾರಿ ನಿಯಮಾವಳಿಗೆ ಒಳಪಟ್ಟು ಕರೆಯುತ್ತೇವೆ ಎಂದರೆ ಸರಿ . ಸಾಕ್ಷಿ ಮುಂದುವರೆದು ಸರ್ಕಾರಿ ಜಾಗಕ್ಕೆ ಶರತ್ತು ಬೇರೆ ಇರುತ್ತದೆ ಹಾಗೂ ಖಾಸಗಿ ಜಾಗಕ್ಕೆ ಶರತ್ತು ಬೇರೆ ಇರುತ್ತದೆ ಎಂದು ನುಡಿದಿರುತ್ತಾರೆ . ಸಮುದ್ರ ತೀರದಲ್ಲಿ ವಾಹನ ಟೆಂಡರ ಕರೆಯುವುದು ಪಕ್ಕಾ ಮಾಲ್ಕಿ ಪಂಚಾಯತಿ ಜಾಗ ಆಗಿರುತ್ತದೆ . ಸದರಿ ಜಾಗ ಪಂಚಾಯತಿಗೆ ಸೇರಿದ್ದು ಎಂದು ತೋರಿಸಲು ಆರ್ ಟಲಿಸಿಯಲ್ಲಾಗಲೀ , ದಾವೆಯಲ್ಲಾಗಲೀ ಬರೆಸಿಲ್ಲ ಎಂದರೆ ಸರಿ . ಸಾಕ್ಷಿ ದಾಖಲಾತಿ ಹಾಜರು ಪಡಿಸುತ್ತೇವೆ ಎಂದು ನುಡಿದಿರುತ್ತಾರೆ . ಪಂಚಾಯಲ್ಲಿರುವ ಪ್ರತಿಯೊಂದು ಸರ್ಕಾರಿ ಜಾಗ ಪಂಚಾಯತಿಯಲ್ಲಿ ನಿಹಿತವಾಗಿರುತ್ತದೆ ಎಂದರೆ ಸರಿಯಲ್ಲ . ನಿಪಿ–25 ಸುತ್ತೋಲೆ ಸರ್ಕಾರಿ ಸುತ್ತೋಲೆಗಳಿಗೆ ಅನುಮೋದಿಸಿ ಇರುವಂತಹದ್ದು ಎಂದರೆ ಸರಿ . ಟೆಂಡರ ಪ್ರಕ್ರಿಯೆ ಯಾವ ರೀತಿ ಕರೆಯಬೇಕು ಸರ್ಕಾರ ನಿಯಮಾವಳಿ ಪ್ರಕಾರ ಕರೆಯಬೇಕಾಗುತ್ತದೆ ಎಂದರೆ ಸರಿ . ಟೆಂಡರ ಕರೆದ ನಂತರದಲ್ಲಿ ನಿಪಿ–3 ರಂತೆ ಒಂದು ಕರಾರು ಮಾಡಿಕೊಂಡಿದ್ದೇವೆ , ಅದು ಪಂಚಾಯತಿಗೆ ಮತ್ತು ಟೆಂಡರ ತೆಗೆದುಕೊಂಡಂತಹ ವ್ಯಕ್ತಿಗೆ ಬಂಧನಕಾರಿಯಾಗಿರುವ ಕರಾರು ಎಂದರೆ ಸರಿ . ಅಗ್ರಿಮೆಂಟ್ ಆದ ನಂತರ ಈ ಕರಾರಿನ ಯಾವುದೇ ನಿಯಮಾವಳಿಗಳನ್ನು ನಾವು ಕೂಡ ಉಲ್ಲಂಘಿಸಿಸುವಂತಿಲ್ಲ ಎಂದರೆ ಸರಿ . ನಾನು ಪ್ರತಿವಾದಿ ಸಲ್ಲಿಸಿದ ಉದಾಹರಣೆಯನ್ನು ಓದಿಕೊಂಡಿದ್ದೇನೆ. ಸದರಿ ಕರಾರಿನಲ್ಲಿ 11 ನೇ ಕಾಲಂ 21 ನೇ ಶರತ್ತಿನಲ್ಲಿ 1 ನೇ ಪಾರ್ಟಿಯವರು ಪ್ರತಿ 11 ತಿಂಗಳಿಗೆ ಗುತ್ತಿಗೆಯನ್ನು ನವೀಕರಿಸಿಕೊಳ್ಳತಕ್ಕದ್ದು ಎಂದು ಇದೆ ಎಂದರೆ ಸರಿ . 11 ತಿಂಗಳಿಗೆ ಒಮ್ಮೆ ನಾವು ನವೀಕರಣ ಮಾಡದೇ ಇದ್ದರೆ ನಮ್ಮಿಂದ ಶರತ್ತು ಉಲ್ಲಂಘನೆಯಾಗುತ್ತದೆ ಎಂದರೆ ಸರಿಯಲ್ಲ. 21 ನೇ ಶರತ್ತಿನ ಪ್ರಕಾರ ನವೀಕರಣಕ್ಕೆ ಅ್ರ್ಜಿಯನ್ನು ಸಲ್ಲಿಸಿದ ನಂತರ ಗ್ರಾಮ ಪಂಚಾಯತಿಯಲ್ಲಿ ಮಿಟಿಂಗ್ ಆಗಿದೆ ಎಂದರೆ ಸಾಕ್ಷಿ ಅರ್ಜಿ ಸಲ್ಲಿಸಿಲ್ಲ , ಕಾರಣ ವಾಹನ

ಪಾರ್ಕಿಂಗ್ ಟೆಂಡರ ನವೀಕರಣ ಹಿಂದೆ ಉಲ್ಲಂಘನೆಯಾದ ಕಾರಣ ಪರಿಶೀಲಿಸಿ ಕ್ರಮ ಕೈಗೊಳ್ಳಬೇಕೆಂದು ಚರ್ಚೆ ಆಗಿದೆ . ಶರತ್ತು ಉಲ್ಲಂಘನೆಯಾಗಿದೆ ಎಂಬ ಬಗ್ಗೆ ನಾವು ಪಂಚನಾಮೆ ಮಾಡಿದ್ದೇವೆ , ಮಿಡಿಯಾದಲ್ಲಿ ಪ್ರಕಟಣೆ ಕೊಟ್ಟಿದ್ದೇವೆ ಹಾಗೂ ಪಾರ್ಟಿಗೆ ನೋಟಿಸ್ ಕೊಟ್ಟಿದ್ದೇವೆ. ಪತ್ರಿಕಾ ವರದಿಗಾರರು ಮಿಡಿಯಾದಲ್ಲಿ ಪ್ರಕಟಣೆ ಹಾಕಿರುತ್ತಾರೆ . ಯಾವ ದಾಖಲಾತಿ ಆಧಾರದ ಮೇಲೆ ಮಿಡಿಯಾದಲ್ಲಿ ಪ್ರಕಟಣೆ ಹಾಕಿದ್ದೀರಿ ಆ ದಾಖಲಾತಿಯನ್ನು ಕೊಡಿ ಎಂದು ನಾವು ಮಿಡಿಯಾದವರನ್ನು ಕೇಳಿಲ್ಲ , ನಾವು ಅದನ್ನು ಕೇಳಲು ಸಕ್ಷಮ ಪ್ರಾಧಿಕಾರ ಅಲ್ಲ . ನಾವು ನೋಟಿಸನ್ನು ಕೊಟ್ಟಿದ್ದೇವೆ ಎಂದು ಹೇಳುವುದು ಮಿಡಿಯಾ ಅನುಸರಿಸಿ ಎಂದರೆ ಸರಿಯಲ್ಲ . ಶರತ್ತು ಉಲ್ಲಂಘನೆಯಾಗಿರುವುದು ನಮಗೂ ಗೊತ್ತಾಯಿತು , ಮಿಡಿಯಾದವರಿಗೂ ಗೊತ್ತಾಯಿತು . ಪಂಚನಾಮೆ ಮಾಡುವ ಮೊದಲು ಈ ದಿನಾಂಕದಂದು ಪಂಚನಾಮೆ ಮಾಡುತ್ತೇವೆ ಎಂದು ಟೆಂಡರ ತೆಗೆದುಕೊಂಡವರಿಗೆ ತಿಳಿಸಿದ್ದೇವೆ . ಆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿ ಮೌಖಿಕವಾಗಿ ತಿಳಿಸಿದ್ದೇವೆ ಎಂದು ನುಡಿದಿರುತ್ತಾರೆ. ಮೌಖಿಕವಾಗಿ ತಿಳಿಸಿದ್ದೇವೆ ಎಂದು ಹೇಳುವ ದಿನಾಂಕದಂದು ನಾನು ಅಲ್ಲಿ ನೌಕರನಾಗಿರಲಿಲ್ಲ ಎಂದರೆ ಸರಿ , ಮಾಹಿತಿಯನ್ನು ಸಂಗ್ರಹಿಸಿದ್ದೇನೆ. ಯಾವ ದಿನಾಂಕದಂದು ಪಂಚನಾಮೆ ಹೋಗುತ್ತೇನೆ ಎಂದು ಮೌಖಿಕವಾಗಿ ಹೇಳಿದ್ದರು ಬರೆದುಕೊಂಡಿದ್ದು ಇಲ್ಲ . ಪಂಚನಾಮೆಗೆ ಹೋಗುತ್ತೇನೆಂದು ಹೇಳಿರುವುದನ್ನು ಅವರ ಬಾಯಿಮಾತಿನಿಂದ ಕೇಳಿರುವುದನ್ನು ಹೊರತು ಪಡಿಸಿ ದಾಖಲಾತಿ ಇಲ್ಲ ಎಂದರೆ ಸರಿ . ನಿಪಿ-12 ಪಂಚನಾಮೆಯಲ್ಲಿ ಪ್ರತಿವಾದಿಗೆ ನಾವು ತಿಳಿಸಿದ್ದೇವೆ ಎಂದು ಯಾವುದೇ ಉಲ್ಲೇಖ ಇಲ್ಲ ಎಂದರೆ ಸರಿ . ನಾವು ಹೇಳುವಂತಹ ಪಂಚನಾಮೆ ಆ ದಿನಾಂಕದಂದು ಯಾವ ಸಮಯದಿಂದ ಯಾವ ಸಮಯದವರೆಗೆ ಬರೆಯಲಾಗಿದೆ ಎಂದು ಸಮಯ ನಮೂದು ಇಲ್ಲ ಎಂದರೆ ಸರಿ . ಪಂಚನಾಮೆ ಎನ್ನುವ ದಾಖಲಾತಿ ನಮ್ಮ ಕಚೇರಿಯ ಲೇಟರಹೆಡ್ ನಲ್ಲಿ ಇಲ್ಲ ಎಂದರೆ ಸರಿ . ಲೇಟರಹೆಡ್ ನಲ್ಲಿ ಬೇಕು ಎಂದು ಇರುವುದಿಲ್ಲ . ಇಂತಹ ದಿನಾಂಕದಂದು ಪಂಚನಾಮೆ ಮಾಡಿದ್ದೇವೆ ಎಂದು ನಮ್ಮ ಪಂಚಾಯತಿ ದಾಖಲಾತಿಯಲ್ಲಿ ನಮೂದು ಇದೆ . ಈ ಕೇಸಿಗೆ ಸಂಬಂಧಪಟ್ಟ ಕಡತ ಇದೆ . ಅದರಲ್ಲಿ ದಾಖಲಾತಿ ಇದೆ. ದಿನವಹಿಯಲ್ಲಿ ಆ ದಿನ ಪಿಡಿಓರವರು ಏನೇನು ಕರ್ತವ್ಯ ಮಾಡಿದ್ದಾರೆ ಅದರಲ್ಲಿ

ಇರಬಹುದು , ನಾನು ನೋಡಿಲ್ಲ. ಆ ತಾರೀಖಿನ ದಿನವಹಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿ ಲಭ್ಯವಿದ್ದರೆ ಹಾಜರು ಪಡಿಸುತ್ತೇನೆ ಎಂದು ನುಡಿದಿರುತ್ತಾರೆ . ನಿಪಿ-12 ಫೋರ್ಜರಿ ಮಾಡಿ ಸೃಷ್ಟಿ ಮಾಡಿದ ದಾಖಲಾತಿ ಎಂದರೆ ಸರಿಯಲ್ಲ. ದಿಃ 16-08-2022 ಆ ದಿನಾಂಕಕ್ಕೆ ನಮ್ಮ ಹಿಂದಿನ ಪಿಡಿಓ ರಜಿಸ್ಟರನಲ್ಲೂ ಕೂಡ ನಮೂದಿಲ್ಲ ಎಂದರೆ ಸಾಕ್ಷಿ ದಾಖಲಾತಿ ಪರಿಶೀಲಿಸಿ ನೋಡಬೇಕು ಎಂದು ನುಡಿದಿರುತ್ತಾರೆ . ನಿಪಿ-12 ಪಂಚನಾಮೆ ಯಾರ ಹಸ್ತಾಕ್ಷರ ಬರವಣಿಗೆಯಲ್ಲಿ ಇದೆ ಎಂದು ಹೇಳಲು ಬರುವುದಿಲ್ಲ .

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ಮುಂದುವರೆದ ಪಾಟೀ ಸವಾಲು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.